**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ**

ಅಸಲು ದಾವಾ ನಂ**. 479/2021** ದಿನಾಂಕ**:06.12.2023.**

ಪಿ.ಡಬ್ಲೂ**:-1**

**: ಸಾಕ್ಷಿಯನ್ನು ಕರೆಯಿಸಿ ಪ್ರಮಾಣಕರಿಸಲಾಯಿತು :**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಆರ. ಎಲ. ಪಿ. ವಕೀಲರಿಂದ:**

ನಾನು ಸಾಕಷ್ಟು ಕರಾರು ಪತ್ರಗಳನ್ನು ಬರೆಯಿಸಿಕೊಂಡು ಅಥಣಿ ನ್ಯಾಯಾಲಯಗಳ ಮುಂದೆ ದಾವೆ ಹಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವ್ಯವಹಾರ ಆಗಿದ್ದರಲ್ಲಿ ಬರೆಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸುಮಾರು 10 ವರ್ಷಗಳಿಂದ 7 ದಾವೆಗಳನ್ನು ಕರಾರು ಪತ್ರದ ಆಧಾರದ ಮೇಲೆ ದಾಖಲಿಸಿರುತ್ತೇನೆ. ನಾನು ಸಾಲ ನೀಡಿದ ವ್ಯಕ್ತಿಗಳಿಂದ ಚೆಕ್ಕುಗಳನ್ನು ಪಡೆದು, ಸದರಿಯವರ ವಿರುದ್ಧ ಚೆಕ್ಕ ಬೌನ್ಸ ಗಳನ್ನು ಸಹ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಎಷ್ಟು ಮಕ್ಕಳಿರುತ್ತಾರೆ ಎಂದು ನನಗೆ ಮಾಹಿತಿ ಇರುವದಿಲ್ಲ. ದಾವಾ ಸ್ವತ್ತು ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತು ಅಥವಾ ಖರೀದಿಸಿದ ಸ್ವತ್ತೋ ಎಂದು ನಾನು ತಿಳಿದುಕೊಂಡಿಲ್ಲ. ದಾವಾ ಸ್ವತ್ತು ಯಾವ ರೀತಿಯ ಸ್ವತ್ತು ಎಂದು ತಿಳಿದುಕೊಳ್ಳಲು ದಾಖಲೆಗಳನ್ನು ತೆಗೆಯಿಸಿ ನೋಡಿರುವದಿಲ್ಲ. ದಾವಾ ಸ್ವತ್ತಿಗೆ ಕರಾರು ಪತ್ರ ಆಗುವದಕ್ಕೂ 2 ದಿನ ಮೊದಲು ಹೋಗಿದ್ದೇವು. ದಾವಾ ಸ್ವತ್ತು ದಕ್ಷಿಣ-ಉತ್ತರವಾಗಿ ಉದ್ದ ಇರುತ್ತದೆ. ನಾನು ಹೋದಾಗ ಜಮೀನಿನಲ್ಲಿ ಯಾವುದೇ ಬೆಳೆ ಇರಲಿಲ್ಲ. ನಾನು ದಾವಾ ಸ್ವತ್ತಿಗೆ ಹೋಗಿ ಬಂದ ನಂತರ ಪುನಹ ದಾವಾ ಸ್ವತ್ತಿಗೆ ಅಥವಾ ಪ್ರತಿವಾದಿಯ ಮನೆಗೆ ಹೋಗಿರುವದಿಲ್ಲ.

ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ಪುತಳಾಬಾಯಿರವರ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ದಕ್ಷಿಣ ಮತ್ತು ಉತ್ತರ ದಿಕ್ಕಿಗೆ ರಸ್ತೆ ಇರುತ್ತವೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ. ಕರಾರು ಪತ್ರ ಬರೆಯಲು ಎಷ್ಟು ಮುಖಬೆಲೆಯ ಸ್ಟಾಂಪ ಪೇಪರ ತರಬೇಕು ಎಂದು ನನಗೆ ಮಾಹಿತಿ ಇರುವದಿಲ್ಲ. ಸಾಕ್ಷಿ ಮುಂದುವರೆದು ಪತ್ರಬಹರಗಾರರೇ ಬರೆದು ಕೊಡಬೇಕು ಎಂದು ನುಡಿಯುತ್ತಾರೆ. ಪತ್ರ ಬರಹಗಾರರು ಪ್ರತಿವಾದಿಗೆ ಸದರಿ ಮಾಹಿತಿ ನೀಡಿರುತ್ತಾರೆ. ಪತ್ರಬರಹಗಾರರು ರೂ.200 ಬೆಲೆಯ ಸ್ಟಾಂಪ ಪೇಪರ ತರಲು ಹೇಳಿರಲಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರದಲ್ಲಿ ನಮೂದಿಸಿದಂತೆ ವ್ಯವಹಾರ ಅಗಿರುವದಿಲ್ಲ ಎಂದರೆ ಸರಿಯಲ್ಲ.

ಖರೀದಿ ವ್ಯವಹಾರದ ಮಾತುಕತೆ ಜಮೀನಿನಲ್ಲಿಯೇ, ನೋಡಿದ ದಿನದಂದೇ ಆಗಿರುತ್ತದೆ. ಆ ರೀತಿ ಜಮೀನನ್ನು ನೋಡಿದ ದಿನದಂದೇ ವ್ಯವಹಾರ ಆಗಿರುತ್ತದೆ ಎಂದು ಕರಾರು ಪತ್ರದಲ್ಲಿ ,

ವಾದಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದು ಇರುವದಿಲ್ಲ. ವ್ಯವಹಾರ ಜಮೀನಿನಲ್ಲಿಯೇ ಆಗಿರುತ್ತದೆ. ವ್ಯವಹಾರ ಆದಾಗ ಮಹಾದೇವ ಹುಚ್ಚಗೌಡರರವರು ಹಾಜರಿದ್ದರು. ಸದರಿಯವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಸದರಿಯವರನ್ನು ಹೊರತುಪಡಿಸಿ ಪ್ರತಿವಾದಿಯ 4-5 ಜನ ಸಂಬಂಧಿಕರು ಹಾಜರಿದ್ದರು. ಸದರಿ ಸಂಬಂಧಿಕರ ಹೆಸರುಗಳು ನನಗೆ ಗೊತ್ತಿಲ್ಲ. ಪ್ರತಿವಾದಿಯ 4-5 ಜನ ಸಂಬಂಧಿಕರು ವ್ಯವಹಾರದ ಸಮಯದಲ್ಲಿ ಹಾಜರಿದ್ದರು ಎಂದು ನನ್ನ ವಾದ ಪತ್ರದಲ್ಲಿ ಬರೆಸಿರುವದಿಲ್ಲ . ಕರಾರು ಪತ್ರದ ಮೇಲೆ ಪೂಜಾರಿ, ಮಹಾದೇವ ಹುಚ್ಚಗೌಡರ ಮತ್ತು ಪತ್ರ ಬರಹಗಾರ ಮಹೇಶ ಕುಲಕರ್ಣಿ ಸಹಿ ಮಾಡಿರುತ್ತಾರೆ.

ಪ್ರತಿವಾದಿಗೆ ಹಣವನ್ನು ಕರಾರು ಆಗುವದಕ್ಕಿಂತಲೂ 2 ದಿನ ಮೊದಲೇ ಕೊಟ್ಟಿರುತ್ತೇನೆ. ಹಣವನ್ನು ಜಮೀನು ನೋಡಲು ಹೋದಾಗಲೇ ಕೊಟ್ಟಿರುತ್ತೇನೆ. ಜಮೀನು ನೋಡಲು ಹೋದಾಗ ಪ್ರತಿವಾದಿಗೆ ಹಣ ಕೊಟ್ಟಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ದಿನ ಮೊದಲೇ ಹಣ ಕೊಟ್ಟಿರುತ್ತೇನೆ ಎಂದು ಕರಾರು ಪತ್ರದಲ್ಲಿ ನಮೂದು ಇರುವದಿಲ್ಲ . ಸಾಕ್ಷಿ ಮುಂದುವರೆದು ಈ ಮೊದಲೇ ಕೊಡಲಾಗಿದೆ ಎಂದು ನಮೂದು ಇರುತ್ತದೆ ಎಂದು ನುಡಿಯುತ್ತಾರೆ.

**ಮುಂದುವರೆದು ಪಾಟೀ ಸವಾಲಗಾಗಿ ಸಮಯ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

(ಪ್ರಶಾಂತ ನಾಗಲಾಪೂರ)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ
**ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ**